Government of Karnataka

# KARNATAKA EXAMINATIONS AUTHORITY

Sampige Road, 18th Cross, Malleshwaram, Bengaluru – 560 012.
Website: http://cetonline.karnataka.gov.in/kea/
e-mail: keaugcet25@gmail.com

**No.: ED/KEA/ADMN/CR-02/2025-26** **Date:13-02-2025**

## Karnataka Common Entrance Test – 2025
## Attention of Students and Parents

**Guidelines for verification of documents after submission of CET-2025 application**

- Students who have claimed Clause Code 'A' and who have not studied from 1st std to 10th Std. in Kannada medium, Rural, Religious / Linguistic Minority reservations but whose 07 years study has been verified through SATS will get a Claim Certificate as Successfully Verified. Such candidates need not visit any college for verification and it means that the application is accepted.
- But the students who have claimed clause code "A" and studied 10 years from 1st Std. to 10th Std. and claimed Kannada Medium, Rural, Religious or Linguistic reservation will receive the claim certificate printed as 'Claimed Verified, or Claimed not Verified or not Claimed'. Such students will have to meet the Principal of PUC/12 Std. studying college or **nearest Government PU college** along with the relevant original documents **(as per the format mentioned in KEA website)** and one set of Xerox copies for verification of the documents.
- Schedule for document verification for students who have entered Clause codes 'B', 'C', 'D', 'I', 'J', 'K', 'L', 'M', 'N' other than clause code 'A' will be published in KEA website .
- Students who have entered clause code 'E', 'F', 'G', 'H', 'O' will have to get the academic documents verified in the PUC/12 Std. studying college. But documents related to Defence, Ex-Defence, CAPF, Ex-CAPF should be submitted thereafter for verification in KEA.
- 371(j), Caste, Caste-Income Certificate RD numbers are being verified online. Hence, students to check the validity of the certificates and enter the RD numbers correctly in the application.

**Important Note:**

Based on the documents submitted by the candidates / parents, the Principal of the colleges will be submitting 'OK' in their login after verification. In case the student has faked/forged any documents and KEA receives information with regard to the forgery, such students will be debarred from counselling process and criminal action will be initiated against such candidates.

Sd/-
**(H. Prasanna, IAS)**
**Executive Director.**

DIPR/CP/5038/2024-25

ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.
ವೆಬ್‌ಸೈಟ್ http://cetonline.karnataka.gov.in/kea/ e-mail: keaugcet25@gmail.com

**ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್–02/2025–26** **ದಿನಾಂಕ:13.02.2025**

## ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (KCET )-2025
## ವಿದ್ಯಾರ್ಥಿಗಳು ಮತ್ತು ಪೋಷಕರ ಅವಗಾಹನೆಗಾಗಿ

**KCET-2025 ಕ್ಕೆ ಅರ್ಜಿಸಲ್ಲಿಸಿದ ಮೇಲೆ ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳು :**

- ಕ್ಲಾಸ್ ಕೋಡ್ 'A' ಹಾಕಿ ಒಂದರಿಂದ ಹತ್ತನೇ ತರಗತಿಯ ವರೆಗೆ ಕನ್ನಡ ಮಾಧ್ಯಮ, ಗ್ರಾಮೀಣ, ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತ ಮೀಸಲಾತಿ ಕೋರಿಲ್ಲದಿದ್ದರೆ (Not Claimed) ಹಾಗೂ SATS ನಿಂದ ಕನಿಷ್ಟ 07 ವರ್ಷ ಪರಿಶೀಲನೆಯಾಗಿದ್ದರೆ ಕ್ಲೇಮ್ ಸರ್ಟಿಫಿಕೇಟ್‌ನಲ್ಲಿ Successfully Verified ಎಂದು ನಮೂದಿಸಲಾಗಿರುತ್ತದೆ. ಅಂತಹ ವಿದ್ಯಾರ್ಥಿಗಳು ಎಲ್ಲಿಗೂ ದಾಖಲೆಗಳ ಪರಿಶೀಲನೆಗೆ ಹೋಗುವ ಅಗತ್ಯವಿಲ್ಲ. ನಿಮ್ಮ ಅರ್ಜಿ ಯಶಸ್ವಿಯಾಗಿ ಸ್ವೀಕರಿಸಲ್ಪಟ್ಟಿರುತ್ತದೆ.
- ಆದರೆ ಕ್ಲಾಸ್ ಕೋಡ್ 'A' ಹಾಕಿ ಒಂದರಿಂದ ಹತ್ತನೇ ತರಗತಿಯ ವರೆಗೆ ಕನ್ನಡ ಮಾಧ್ಯಮ, ಗ್ರಾಮೀಣ, ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತ ಮೀಸಲಾತಿ ಕೋರಿರುವ (claimed in the application) ವಿದ್ಯಾರ್ಥಿಗಳಿಗೆ 'Claimed Verified OR Claimed not Verified OR not Claimed' ಎಂದು ಕ್ಲೇಮ್ ಸರ್ಟಿಫಿಕೇಟ್‌ನಲ್ಲಿ ನಮೂದಿಸಲಾಗಿರುತ್ತದೆ. ಅಂತಹ ವಿದ್ಯಾರ್ಥಿಗಳು ಅಗತ್ಯವಿರುವ ಎಲ್ಲಾ ಮೂಲ ದಾಖಲಾತಿಗಳೊಂದಿಗೆ **(ಕೆಇಎ ವೆಬ್‌ಸೈಟಿನಲ್ಲಿ ಸಲ್ಲಿಸಿರುವ ನಮೂನೆಗಳಲ್ಲಿ)** ಹಾಗೂ ಒಂದು ಸೆಟ್ ಝೆರಾಕ್ಸ್ ಪ್ರತಿಯೊಂದಿಗೆ ತಾವು ಪಿಯುಸಿ / 12ನೇ ತರಗತಿ ವ್ಯಾಸಂಗ ಮಾಡುತ್ತಿರುವ / ಮಾಡಿರುವ ಕಾಲೇಜಿಗೆ ಅಥವಾ **ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜಿನ** ಪ್ರಾಂಶುಪಾಲರನ್ನು ಭೇಟಿ ಮಾಡಿ ದಾಖಲೆಗಳನ್ನು ಪರಿಶೀಲಿಸಿ ಕೊಳ್ಳುವುದು.
- ಕ್ಲಾಸ್ ಕೋಡ್ 'A' ಹೊರತು ಪಡಿಸಿ ಇತರೆ ಕ್ಲಾಸ್ ಕೋಡ್ ಗಳನ್ನು ('B', 'C' 'D' 'I', 'J', 'K', 'L', 'M', 'N') ನಮೂದಿಸಿರುವ ವಿದ್ಯಾರ್ಥಿಗಳಿಗೆ ದಾಖಲೆಗಳ ಪರಿಶೀಲನೆಯನ್ನು ಮುಂದಿನ ದಿನಗಳಲ್ಲಿ ಪ್ರಾಧಿಕಾರದಲ್ಲಿ ನಡೆಸುವ ಬಗ್ಗೆ ವೇಳಾಪಟ್ಟಿ ಪ್ರಕಟಿಸಲಾಗುವುದು.
- ಕ್ಲಾಸ್ ಕೋಡ್ 'E', 'F', 'G', 'H', 'O' ಕ್ಲಾಸ್ ಕೋಡ್‌ಗಳನ್ನು ನಮೂದಿಸಿರುವ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಅಭ್ಯರ್ಥಿಯ ವ್ಯಾಸಂಗದ ವಿವರಗಳನ್ನು ಮಾತ್ರ ಪರಿಶೀಲಿಸಿ ಕೊಳ್ಳುವುದು ಹಾಗೂ ಸಂಬಂಧಿಸಿದ Defence, Ex-Defence, CAPF, Ex-CAPF ಪ್ರಮಾಣ ಪತ್ರಗಳನ್ನು ಪ್ರಾಧಿಕಾರದಲ್ಲಿ ನಂತರ ಪರಿಶೀಲನೆಗೆ ಸಲ್ಲಿಸುವುದು.
- ಮೀಸಲಾತಿ ಕೋರಿ 371(ಜೆ), ಜಾತಿ, ಜಾತಿ–ಆದಾಯ ಪ್ರಮಾಣ ಪತ್ರಗಳ RD ಸಂಖ್ಯೆ ನಮೂದಿಸಿದ ಮಾಹಿತಿಯನ್ನು Online ನಲ್ಲಿಯೇ ಪರಿಶೀಲಿಸಲಾಗುತ್ತಿದೆ. ಅವಧಿ ಮೀರಿಲ್ಲದ RD ಪ್ರಮಾಣ ಪತ್ರಗಳ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು. ಇವುಗಳ ಪರಿಶೀಲನೆಗಾಗಿ ಎಲ್ಲಿಗೂ ಹೋಗುವ ಅಗತ್ಯವಿಲ್ಲ.

**ವಿಶೇಷ ಸೂಚನೆ:**

ವಿದ್ಯಾರ್ಥಿಗಳು / ಪೋಷಕರು ಸಲ್ಲಿಸುವ ಮೂಲ ದಾಖಲೆಗಳನ್ನು ಪರಿಶೀಲಿಸಿ ಪ್ರಾಂಶುಪಾಲರು ತಮ್ಮ ಲಾಗಿನ್‌ನಲ್ಲಿ ದಾಖಲೆ ಸರಿ ಇರುವ ಬಗ್ಗೆ 'OK' ಮಾಡಿರುತ್ತಾರೆ. ಯಾವುದೇ ವಿದ್ಯಾರ್ಥಿ ದಾಖಲೆಗಳನ್ನು ನಕಲು ಮಾಡಿದ್ದಲ್ಲಿ, ತಪ್ಪು ಮಾಹಿತಿ ನೀಡಿದ್ದಲ್ಲಿ, ವಿದ್ಯಾರ್ಥಿ ಮತ್ತು ಪೋಷಕರೇ ಜವಾಬ್ದಾರಿಯಾಗಿರುತ್ತಾರೆ. ಕೆಇಎಗೆ ತಪ್ಪು ಮಾಡಿರುವುದು ಕಂಡುಬಂದಲ್ಲಿ ತಕ್ಷಣ ಅಂತಹವರನ್ನು ಕೌನ್ಸೆಲಿಂಗ್ ಪ್ರಕ್ರಿಯೆಯಿಂದ ಹೊರಗೆ ಹಾಕಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು.

ಸಹಿ/–
**(ಹೆಚ್. ಪ್ರಸನ್ನ ಭಾ.ಆ.ಸೇ.)**
**ಕಾರ್ಯನಿರ್ವಾಹಕ ನಿರ್ದೇಶಕರು**

ವಾಸಾಸಂಇ/ವಾಪ್ರ/5038/2024–25

12x14cms

TOI DH, VV, UV, SK
(Karnataka Editions)